		ಕಾರ್ಯವ್ಯಾಪ್ತಿಗೆ ಒಳಪಟ್ಟಿತ್ತು).	
4.	ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತ	1. ಧಾರವಾಡ 2. ಗದಗ 3. ಹಾವೇರಿ 4. ಬೆಳಗಾಂ 5. ಬಿಜಾಪುರ 6. ಬಾಗಲಕೋಟೆ 7. ಉತ್ತರ ಕನ್ನಡ	01.06.2002
5.	ಗುಲ್ಬರ್ಗಾ ವಿದ್ಯುತ್ ಸರಬರಾಜು ಕಂಪನಿ	1. ಗುಲ್ಬರ್ಗಾ 2. ಬೀದರ್ 3. ರಾಯಚೂರು 4. ಕೊಪ್ಪಳ 5. ಬಳ್ಳಾರಿ	01.06.2002

ಅನುಬಂಧ (1)

ಚುಕ್ಕೆ ಗುರ್ತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಿದ ಉತ್ತರಗಳು

426 (745) ಶ್ರೀ ಅಭಯಚಂದ್ರ ಕೆ. (ಮೂಡಬಿದ್ರೆ): ಮಾನ್ಯ ಮೀನುಗಾರಿಕೆ ಮತ್ತು ಮುಜರಾಯಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ಮೂಡಬಿದ್ರೆಯ ಸಸಿಹಿತ್ಲು ಸಮುದ್ರ ಕಿನಾರೆಯಾಗಿದ್ದು ಪ್ರತಿವರ್ಷ ಸುನಾಮಿ ಮತ್ತಿತರ ಭೀಕರ ಅವಘಡಗಳಿಂದ ಪಾರಾಗಲು ಸಸಿಹಿತ್ಲು-ಹಳೆಯಂಗಡಿ ಸೇತುವೆ ರಚನೆ 1.50 ಕೋಟಿ ವೆಚ್ಚದ ಪ್ರಸ್ತಾವನೆ ಸಲ್ಲಿಸಲಾಗಿದ್ದು ಈ ತನಕ ಮಂಜೂರಾತಿಯಾಗದಿರಲು ಕಾರಣವೇನು;

ಆ) ಯಾವಾಗ ಮಂಜೂರು ಮಾಡಲಾಗುವುದು ಹಾಗೂ ಈ ಬಗ್ಗೆ ತೆಗೆದುಕೊಂಡ ಕ್ರಮಗಳೇನು? (ಸಂಪೂರ್ಣ ವಿವರಗಳನ್ನು ಒದಗಿಸುವುದು)?

ಶ್ರೀ ಬಿ. ನಾಗರಾಜ ಶೆಟ್ಟಿ (ಮೀನುಗಾರಿಕೆ ಮತ್ತು ಮುಜರಾಯಿ ಸಚಿವರು):

ಅ) ಹಳೆಯಂಗಡಿಯ ಕಡಿಕೆಯಿಂದ ಸಸಿಹಿತ್ಲುಗೆ ಸ್ಥಳೀಯರ ಬೇಡಿಕೆಯಂತೆ ರೂ. 20.00 ಲಕ್ಷಗಳ ಅಂದಾಜು ವೆಚ್ಚದಲ್ಲಿ ಕಾಲು ಸೇತುವೆ ನಿರ್ಮಿಸಲು ಪ್ರಾರಂಭದಲ್ಲಿ ಯೋಜಿಸಲಾಗಿತ್ತು. ನಂತರ ಈ ಸೇತುವೆಯು ಉಪಯೋಗಕ್ಕೆ ಬರುವುದಿಲ್ಲವೆಂದು ಅಭಿಪ್ರಾಯಪಡಲಾಗಿ ವಾಹನ ಸಂಚಾರಕ್ಕೆ ಅನುಕೂಲವಾಗುವಂತೆ ಸದರಿ ಸೇತುವೆಯನ್ನು ನಿರ್ಮಿಸಲು ಸಚಿವ ಸಂಪುಟದ ಉಪ ಸಮಿತಿಯು ಅನುಮೋದನೆಯನ್ನು ನೀಡಿದ್ದು, ಈ ಸಂಬಂಧ ರೂ. 190.18 ಲಕ್ಷಗಳ ಅಂದಾಜು ಪಟ್ಟಿಯನ್ನು ಸರ್ಕಾರಕ್ಕೆ ಸಲ್ಲಿಸಲಾಗಿದ್ದು, ಏತನ್ಮಧ್ಯೆ, ನಬಾರ್ಡ್ ಸಂಸ್ಥೆಯ ಅಧಿಕಾರಿಗಳು ಈಗಾಗಲೇ

ಸ್ಥಳ ಪರಿಶೀಲನೆ ನಡೆಸಿದ್ದು, ಈ ಯೋಜನೆಯಲ್ಲಿ ಕೆಲವೊಂದು ಬದಲಾವಣೆಗಳನ್ನು ಮಾಡಲು ಸೂಚಿಸಿದ್ದು, ಅದರಂತೆಯೇ ಕೆಲವೊಂದು ಬದಲಾವಣೆಗಳನ್ನು ಮಾಡಲಾಗಿದೆ. ಈ ಬದಲಾವಣೆಗಳಿಗೆ ನಬಾರ್ಡ್ ಸಂಸ್ಥೆಯಿಂದ ಮಂಜೂರಾತಿ ದೊರಕಿದ ನಂತರ ಅನುದಾನದ ಲಭ್ಯತೆಗನುಗುಣವಾಗಿ ಈ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗುವುದು.

427 (747) ಶ್ರೀ ಅಭಯಚಂದ್ರ ಕೆ. (ಮೂಡಬಿದ್ರೆ): ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ. ಮೂಡಬಿದ್ರೆಯು ಅತೀ ವೇಗವಾಗಿ ಬೆಳೆಯುತ್ತಿರುವ ಪಟ್ಟಣವಾಗಿದ್ದು ಯು.ಜಿ.ಡಿ ಸ್ಕೀಮಿನ ಅನುಷ್ಠಾನದ ಬಗ್ಗೆ ಅನೇಕ ಬಾರಿ ಕೋರಿದ್ದರೂ ಈ ತನಕ ಮಂಜೂರು ಮಾಡದಿರಲು ಕಾರಣವೇನು;

ಆ. ಮಂಜೂರು ಮಾಡಲಾಗುವುದು ಯಾವಾಗ;

ಇ. ಈ ಬಗ್ಗೆ ತೆಗೆದುಕೊಂಡ ಕ್ರಮವೇನು?

ಶ್ರೀ ಹೆಚ್.ಡಿ. ಕುಮಾರಸ್ವಾಮಿ (ಮುಖ್ಯಮಂತ್ರಿಗಳು):

ಅ. ಸದರಿ ಪ್ರಸ್ತಾವನೆಯನ್ನು ಶ್ರವಣಬೆಳಗೊಳದಲ್ಲಿ ನಡೆದ ಮಹಾಮಸ್ತಕಾಭಿಷೇಕದ ಅನುದಾನದಲ್ಲಿ ಕೈಗೊಳ್ಳಬೇಕಾಗಿರುವುದರಿಂದ ಕಡತ ಸಂಖ್ಯೆ: ನಅಇ 16 ಯುಡಬ್ಲ್ಯೂಎಸ್ 2006 ಕಡತವನ್ನು ಕಂದಾಯ ಇಲಾಖೆಯ ಸಹಮತಿಗಾಗಿ ದಿನಾಂಕ 10.3.2005ರಂದು ಕಳುಹಿಸಲಾಗಿದೆ.

ಆ. ಕಂದಾಯ ಇಲಾಖೆಯ ಸಹಮತಿ ದೊರೆತ ನಂತರ ಮಂಜೂರು ಮಾಡಲಾಗುವುದು.

ಇ. ಉದ್ಭವಿಸುವುದಿಲ್ಲ.

428 (748) ಶ್ರೀ ಅಭಯಚಂದ್ರ ಕೆ. (ಮೂಡಬಿದ್ರೆ): ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ. ಮೂಡಬಿದ್ರೆ ಪುರಸಭೆಯ ಕುಡಿಯುವ ನೀರಿನ ಯೋಜನೆ ಪೂರ್ಣಗೊಂಡಿದ್ದು ಓವರ್‌ಹೆಡ್ ಟ್ಯಾಂಕ್‌ಗಳ ಕೊರತೆಯಿಂದಾಗಿ ಮೂಡಬಿದ್ರಿ ನಗರಕ್ಕೆ ಸಮರ್ಪಕವಾಗಿ ನೀರು ಸರಬರಾಜು ಮಾಡಲು ಸಾಧ್ಯವಾಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ. ಬಂದಿದ್ದಲ್ಲಿ, ಈ ಓವರ್ ಹೆಡ್ ಟ್ಯಾಂಕ್‌ಗಳನ್ನು ಯಾವಾಗ ನಿರ್ಮಿಸಲಾಗುವುದು ಮತ್ತು ನೀರನ್ನು ಎಂದಿನಿಂದ ಒದಗಿಸಲಾಗುವುದು;

ಇ. ಈ ಬಗ್ಗೆ ಸರ್ಕಾರ ತೆಗೆದುಕೊಂಡ ಕ್ರಮವೇನು; (ಪೂರ್ಣ ವಿವರಗಳನ್ನು ಒದಗಿಸುವುದು)?

ಶ್ರೀ ಹೆಚ್.ಡಿ. ಕುಮಾರಸ್ವಾಮಿ (ಮುಖ್ಯಮಂತ್ರಿಗಳು):

ಅ. ಬಂದಿದೆ